ಸಾತ್ತ್ವಿಕ ತ್ಯಾಗಿಯ ಇನ್ನೊಂದು ಲಕ್ಷಣ ಅವನು ಮೇಧಾವಿಯಾಗಿರುತ್ತಾನೆ. ಅವನ ಬುದ್ಧಿ, ಅದು ಪರಿಶುದ್ಧವಾಗಿರುವುದರಿಂದ, ಅಧ್ಯಾತ್ಮ ಜ್ಯೋತಿಯಿಂದ ಬೆಳಗುತ್ತಿರುತ್ತದೆ. ಅದು ಬಲ್ಬಿನ ಫಿಲಮೆಂಟ್ ಇದ್ದ ಹಾಗೆ – ವಿದ್ಯುತ್ ಶಕ್ತಿಯ ಮೂಲಕ ಕಾಣಿಸಿಕೊಳ್ಳದೆ ಹರಿಯುತ್ತಿರುತ್ತದೆ, ಆದರೆ ಅದು ಫಿಲಮೆಂಟ್ ಮೂಲಕ ಹರಿಯುವಾಗ ಪ್ರಕಾಶಮಾನವಾಗಿ ಬೆಳಗುತ್ತದೆ.

ಮೂರನೆಯ ಮುಖ್ಯವಾದ ಗುಣ: ಅವನು ಛಿನ್ನ ಸಂಶಯನಾಗಿರುತ್ತಾನೆ – ಯಾವುದೇ ಬಗೆಯ ಗೊಂದಲ ಸಂಶಯಗಳೂ ಅವನಲ್ಲಿರುವುದಿಲ್ಲ. ಹೀಗಾಗಿ ಅವನಲ್ಲಿ ಉತ್ತಮ ನಿರ್ಣಯ ಸಾಮರ್ಥ್ಯ (decision making) ಇರುತ್ತದೆ. ಯಾವುದೇ ವಿಷಯದಲ್ಲಿಯೂ ಕಿಂಕರ್ತವ್ಯವಿಮೂಢನಂತಿರುವುದಿಲ್ಲ. ಅವನು ಆಧ್ಯಾತ್ಮಿಕ ಆದರ್ಶಕ್ಕೆ ಸಂಪೂರ್ಣ ಬದ್ಧನಾಗಿರುವುದರಿಂದ, ಎಲ್ಲವನ್ನೂ ಆ ಆದರ್ಶದ ಬೆಳಕಿನಲ್ಲಿ ಅಳೆಯುವುದರಿಂದ ಅವನಲ್ಲಿ ಸಂಶಯ ಗೊಂದಲಗಳಿಗೆ ಎಡೆಯಿರುವುದಿಲ್ಲ.

ಇಂತಹ ಸಾತ್ತ್ವಿಕ ವ್ಯಕ್ತಿಯಲ್ಲಿ ಕರ್ತೃತ್ವಬುದ್ಧಿಯಿರುವುದಿಲ್ಲ, ಏಕೆಂದರೆ ಅವನಿಗೆ ಗೊತ್ತು, ಯಾವುದೇ ಕೆಲಸವೂ ತನ್ನೊಬ್ಬನಿಂದ ಮಾತ್ರ ಆಗುವುದಿಲ್ಲ, ಹಲವಾರು ಅಂಶಗಳು ಸೇರಿ ಆಗುತ್ತದೆ ಎಂದು. ಶ್ರೀಕೃಷ್ಣನು ಅಂತಹ ಐದು ಅಂಶಗಳನ್ನು ಪ್ರಸ್ತಾಪಿಸುತ್ತಾನೆ: ಅಧಿಷ್ಠಾನ, ಕರ್ತಾ, ವಿವಿಧಕರಣಗಳು, ಬಹುಬಗೆಯ ಚಟುವಟಿಕೆಗಳು ಮತ್ತು ದೈವ. ಅಧಿಷ್ಠಾನವೆಂದರೆ ಒಂದು ಕಾರ್ಯ ಸಾಧನೆಗೆ ಬೇಕಾದ ಮೂಲಭೂತ ವ್ಯವಸ್ಥೆಗಳು (infrastructure). ಕರಣಗಳು ಎಂದರೆ ಕಾರ್ಯಸಾಧನೆಗೆ ಬೇಕಾದ ವಿವಿಧ ಉಪಕರಣಗಳು. ಈ ಕಾರ್ಯಕ್ಕೆ ಸಂಬಂಧಪಟ್ಟ ಅನೇಕ ಚಟುವಟಿಕೆಗಳಿರುತ್ತವೆ. ಇವುಗಳನ್ನು ಮಾಡುವ ಅನೇಕರು ಇರುತ್ತಾರೆ. ಇಷ್ಟೆಲ್ಲ ಇದ್ದರೂ ದೈವಾನುಗ್ರಹವಿಲ್ಲದಿದ್ದರೆ ಯಾವ ಕಾರ್ಯವೂ ನಡೆಯುವುದಿಲ್ಲ. ವ್ಯವಸಾಯಕ್ಕೆ ಎಲ್ಲ ಸಿದ್ಧವಾಗಿದ್ದರೂ ಮಳೆಯೇ ಬರದಿದ್ದರೆ ಅಥವಾ ಅತಿವೃಷ್ಟಿಯಾದರೆ ಎಲ್ಲ ವ್ಯರ್ಥವಾಗುತ್ತದೆ. ಎಲ್ಲವೂ ಕೂಡಿ ಬಂದಾಗ ಒಂದು ಕಾರ್ಯ ಯಶಸ್ವಿಯಾಗಿ ನೆರವೇರುತ್ತದೆ.

ವಾಸ್ತವ ಸ್ಥಿತಿ ಹೀಗಿರುವಾಗ ಒಬ್ಬ ವ್ಯಕ್ತಿಯು ತನ್ನಿಂದಲೇ ಎಲ್ಲ ನಡೆಯುವುದು ಎಂದು ಭಾವಿಸಿದರೆ ಅದು ಮೂರ್ಖತನವಾಗುತ್ತದೆ. ಅಂಥವನನ್ನು ಶ್ರೀಕೃಷ್ಣನು 'ದುರ್ಮತಿ' ಎಂದು ಕರೆಯುತ್ತಾನೆ. *(ಶ್ಲೋಕ ೧೬)*. ಮೋಡ ಚಲಿಸುತ್ತಿರುವಾಗ ಚಂದ್ರ ಚಲಿಸುತ್ತಿರುವಂತೆ ಕಾಣುವಂತೆ, ಶರೀರಾದಿಗಳು ಕೆಲಸ ಮಾಡುತ್ತಿದ್ದರೂ ನಾನೇ ಮಾಡುತ್ತಿರುವೆನೆಂಬ ಭ್ರಮೆ ಉಂಟಾಗುತ್ತದೆ. ವಿದ್ಯುತ್ತಿನಿಂದ ಯಂತ್ರವು ಚಲಿಸುತ್ತದೆ, ಆದರೆ ಕೆಲಸವೆಲ್ಲ ಯಂತ್ರಕ್ಕೆ ಸೇರಿರುವುದು. ವಿದ್ಯುತ್ ನಿಜವಾಗಿ ಕೆಲಸ ಮಾಡುವುದಿಲ್ಲ. ವಿದ್ಯುತ್ ಶಕ್ತಿಯು ಯಂತ್ರದೊಡನೆ ಒಂದಾಗಿ ತಾನೇ ಎಲ್ಲ ಮಾಡುವುದು ಎಂದು ಭಾವಿಸಿದಂತೆ ಜೀವಾತ್ಮವೂ ಭಾವಿಸುತ್ತದೆ. ಹಲವಾರು ಅಂಶಗಳು ಸೇರಿ ಒಂದು ವ್ಯಕ್ತಿತ್ವವಾಗಿದೆ – ಇವಾವುದನ್ನೂ ನಾನು ಮಾಡಿರುವುದಿಲ್ಲ, ಇವಾವುವೂ ನಾನಲ್ಲ – ಆದರೂ ಎಷ್ಟೊಂದು ಹೆಮ್ಮೆ. ಒಂದು ಮನೆಯನ್ನು ಕಟ್ಟುವುದಕ್ಕೆ ಉಪಯೋಗಿಸುವ ಕಲ್ಲು ಮರಗಳಾವುವೂ ನಮ್ಮಿಂದಾದವುಗಳಲ್ಲ, ಅವೆಲ್ಲ ಸೇರಿ ನಮಗೆ ಆಶ್ರಯವನ್ನು ನೀಡುತ್ತವೆ. ಆದರೂ 'ಅದು ನನ್ನ ಮನೆ' ಎಂದು ಹೆಮ್ಮೆ ಪಡುತ್ತೇವೆ. ಮೇಲಿನ ಪಂಚ ಕಾರಣಗಳ ವಿಶ್ಲೇಷಣೆಯಿಂದ ನಾವು ಕಲಿಯಬಹುದಾದ ಪಾಠಗಳು:

೧. ಹಲವಾರು ಅಂಶಗಳು ಸೇರಿ ಒಂದು ಕೆಲಸವಾಗುತ್ತದೆ. ಆದ್ದರಿಂದ ಕರ್ತೃತ್ವವನ್ನು ಮುಂದೆ ಮಾಡಬಾರದು.

೨. ಒಂದು ಕೆಲಸದಲ್ಲಿ ಎಲ್ಲ ಅಂಶಗಳೂ ಮುಖ್ಯ, ಯಾವುದನ್ನೂ ನಾವು ಕಡೆಗಣಿಸುವಂತಿಲ್ಲ.

೩. ಎಲ್ಲವೂ ತನ್ನ ಕೈಯಲ್ಲಿಲ್ಲ ಎಂಬ ನಮ್ರತೆಯ ಭಾವ.

೪. ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು.

೫. ವಾಸ್ತವ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು ಮತ್ತು ಆಶಾವಾದವಿರಬೇಕು.

ಈ ಅಧ್ಯಾಯದ ಮೊದಲ ೧೬ ಶ್ಲೋಕಗಳ ಒಟ್ಟು ಅರ್ಥ : ಕರ್ತೃತ್ವಭಾವವನ್ನೂ ಒಡೆತನದ ಭಾವವನ್ನೂ ತ್ಯಜಿಸಿ ನಿರ್ಲಿಪ್ತ ಜೀವನವನ್ನು ನಡೆಸುತ್ತಿದ್ದರೆ, ಹಂತಹಂತವಾಗಿ ಕರ್ಮಗಳು ಬಿದ್ದು ಹೋಗಿ ಸ್ವಾಭಾವಿಕವಾಗಿಯೇ ಸಂನ್ಯಾಸ ಪ್ರಾಪ್ತಿಯಾಗುತ್ತದೆ. ನಿಜವಾದ ಸಂನ್ಯಾಸಿ ಯಾರೆಂಬುದನ್ನು ಶ್ರೀಕೃಷ್ಣನು ಆರನೆಯ ಅಧ್ಯಾಯದಲ್ಲಿ ಹೇಳಿದ್ದಾನೆ:

**ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।**
**ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥**

''ಕರ್ಮಫಲವನ್ನು ಆಶ್ರಯಿಸದೆ, ಮಾಡಬೇಕಾದ ಕರ್ಮವನ್ನು ಯಾವನು ಮಾಡುತ್ತಾನೆಯೋ ಅವನೇ ನಿಜವಾದ ಸಂನ್ಯಾಸಿ ಮತ್ತು ಅವನೇ ಯೋಗಿ; ಅವನು ಅಗ್ನಿಯಿಲ್ಲದವನೂ ಅಲ್ಲ, ಕ್ರಿಯಾರಹಿತನೂ ಅಲ್ಲ.'' ಅಗ್ನಿಯಿಲ್ಲದವನು ಎಂದರೆ ಅಗ್ನಿಹೋತ್ರಾದಿ ವೈದಿಕ ಕರ್ಮಗಳನ್ನು ಬಿಟ್ಟವನು. ವ್ಯಾವಹಾರಿಕ ಕೆಲಸಗಳನ್ನು ತ್ಯಜಿಸಿದವನು.



''ದ್ವೇಷಕ್ಕೆ ಪ್ರತಿಯಾಗಿ ದ್ವೇಷವನ್ನು, ಹಿಂಸೆಗೆ ಪ್ರತಿಯಾಗಿ ಹಿಂಸೆಯನ್ನು ಹಿಂದಿರುಗಿಸದಿರಿ. ಅತ್ಯುತ್ತಮವಾದುದನ್ನೇ ಬಯಸುತ್ತಾ ನೀವು ಕೆಡುಕು ಹಾಗೂ ಅಜ್ಞಾನದಿಂದ ಮುಕ್ತರಾಗಲು ಪ್ರಯತ್ನಿಸಬೇಕು.''

''ಅತ್ಯಂತ ಉತ್ತಮವಾದುದು ಬೇಕಿದ್ದರೆ ನಿಮ್ಮಲ್ಲಿ ಸಮತ್ವವಿರಬೇಕು. ಅತ್ಯಂತ ವಿರುದ್ಧವಾದ ಸನ್ನಿವೇಶ ಎದುರಾದರೂ ನಿಮ್ಮ ಸಮತೋಲನವನ್ನು ಕಾಪಾಡಿಕೊಳ್ಳಿ.''

''ಸತ್ಯಕ್ಕೆ ಅನೇಕ ದೃಷ್ಟಿಕೋನಗಳಿವೆ. ಅನಂತ ಸತ್ಯ ಅನಂತ ರೀತಿಯಲ್ಲಿ ವ್ಯಕ್ತವಾಗುವುದು. ಋಷಿಗಳು ಒಂದೇ ಸತ್ಯವನ್ನು ಹಲವು ರೀತಿಯಲ್ಲಿ ಹೇಳುವರು.''

*– ಭಗವಾನ್ ಶ್ರೀಕೃಷ್ಣ*

# ಅಸಿಸ್ಸಿಯ ಸಂತ ಫ್ರಾನ್ಸಿಸ್

ಭಾಗ ೨

ಸ್ವಾಮಿ ವೀರೇಶಾನಂದ

## ಫ್ರಾನ್ಸಿಸ್‌ನ ಶ್ರೇಷ್ಠತೆ

ಅಸಿಸ್ಸಿಯ ಫ್ರಾನ್ಸಿಸ್ ಒಬ್ಬ ಆಧ್ಯಾತ್ಮಿಕ ದಾರ್ಶನಿಕನಾಗಿದ್ದನು ಮಾತ್ರವಲ್ಲ , ಒಬ್ಬ ಶ್ರೇಷ್ಠ ಕವಿಯಾಗಿದ್ದನು, ಕೂಡ. ಬಡತನವು ಅವನ 'ವಧು'ವಾಗಿತ್ತು ಎಂದು ಆತನ ಸಮಕಾಲೀನರು ಕೊಂಡಾಡಿದ್ದಾರೆ. ಬಡತನವೆನ್ನುವುದು ಫ್ರಾನ್ಸಿಸ್‌ಗೆ ಆಪ್ಯಾಯಮಾನವಾದ ಸಂಗತಿಯಾಗಿತ್ತು. ಹಾಗೆಂದೇ ತನ್ನ ಕಟ್ಟಕಡೆಯ ಬರಹವಾದ 'ಟೆಸ್ಟ ಮೆಂಟ್'ನಲ್ಲಿ ಪರಿಪೂರ್ಣ ಬಡತನವೇ ತನ್ನ ಪಂಥದ ಸಂನ್ಯಾಸಿಗಳ ಏಕಮಾತ್ರ ಜೀವನವಿಧಾನವಾಗಬೇಕು ಎಂಬ ಸ್ಪಷ್ಟವಾದ ಮಾರ್ಗದರ್ಶನವನ್ನು ಅವನು ನೀಡಿದ್ದಾನೆ. ಅಂಥ ಬಡತನವು ಬರಿಯ ಬಾಹ್ಯ ಬಡತನವಾಗಿರಲಿಲ್ಲ. ಭಗವಂತನಿಗಾಗಿ ತನ್ನ ಸ್ವಂತ ಆತ್ಮವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದಾಗಿತ್ತು.

ಫ್ರಾನ್ಸಿಸ್ ಪ್ರಕೃತಿಯಲ್ಲಿ ಭಗವಂತನನ್ನು ಕಾಣುತ್ತಿದ್ದನು. (ಇದರ ವಿವರಣೆಯನ್ನು ಹಿಂದಿನ ಸಂಚಿಕೆಯ ಲೇಖನದ ಪ್ರಥಮ ಭಾಗದಲ್ಲಿಯೇ ನೀಡಲಾಗಿದೆ.) ಅವನು ಕುರೂಪಿಯಾಗಿದ್ದನು. ತನ್ನನ್ನು 'ಕಪ್ಪು ಕೋಳಿ' ಎಂದು ತಾನೇ ಹೀಗೆಳೆಯುತ್ತಿದ್ದನು. ತನ್ನ ದೇಹವನ್ನೂ 'ಒಬ್ಬ ಸಹೋದರ ಕತ್ತೆ' ಎಂದು ಹಾಸ್ಯವಾಗಿ ಕರೆಯುತ್ತಿದ್ದನು. ತೀವ್ರ ತಪಸ್ಸು , ಉಪವಾಸ, ಪ್ರಾರ್ಥನೆ – ಇವುಗಳಿಂದ ಅದನ್ನು ದಂಡಿಸಿದ್ದಕ್ಕಾಗಿ ಕ್ಷಮೆ ಕೇಳುತ್ತಿದ್ದನು. ಮರಣವನ್ನು 'ನನ್ನ ಸಹೋದರಿ' ಎಂದು ಬಣ್ಣಿಸುತ್ತಿದ್ದನು. ಇಡೀ ನಿಸರ್ಗವನ್ನು ಭಗವಂತನ ಪ್ರತಿರೂಪವೆಂದು ಅವನು ಭಾವಿಸಿದ್ದನು. ಎಲ್ಲಕ್ಕಿಂತ ಮಿಗಿಲಾಗಿ, ಭ್ರಾತೃತ್ವ ಭಾವನೆಯಿಂದ, ದೇವರ ಹೆಸರಿನಲ್ಲಿ, ಫ್ರಾನ್ಸಿಸ್ ಇಡೀ ಮಾನವತೆಯನ್ನು ಅಪ್ಪಿಕೊಂಡಿದ್ದನು. ಅವನ ಚರಿತ್ರೆಕಾರರು ಈ ವಿಷಯದಲ್ಲಿ ಹೀಗೆ ಬರೆಯುತ್ತಾರೆ: ಏಸುಕ್ರಿಸ್ತನು ಯಾರಿಗಾಗಿ ತನ್ನ ಪ್ರಾಣವನ್ನು ತ್ಯಾಗ ಮಾಡಿದನೋ, ಅವರನ್ನು ಪ್ರೀತಿಸದವನು ಕ್ರಿಸ್ತನ ಭಕ್ತನೇ ಅಲ್ಲ ಎಂದು ಫ್ರಾನ್ಸಿಸ್ ಭಾವಿಸಿದ್ದನು.

## ಮಹಿಳೆಯರ, ಜನಸಾಮಾನ್ಯರ ಪಂಗಡಗಳು

ಕ್ರಿ.ಶ. ೧೨೧೨ರಲ್ಲಿ ಫ್ರಾನ್ಸಿಸ್ ಮಹಿಳೆಯರಿಗಾಗಿ ಒಂದು ಪ್ರತ್ಯೇಕ ಸಂಪ್ರದಾಯವನ್ನು ಹುಟ್ಟುಹಾಕಿದನು. ಇದರ ಉಗಮದ ಕಥೆ ಹೀಗಿದೆ: ಕ್ಲೇರ್ ಎನ್ನುವವಳು ಅಸಿಸ್ಸಿಯ ಒಬ್ಬ ಶ್ರೀಮಂತ ಮಹಿಳೆ. ಆ ನಗರದ ಸ್ಯಾನ್ ರುಫಿನೊ ಚರ್ಚ್‌ನಲ್ಲಿ ಫ್ರಾನ್ಸಿಸ್ ಬೋಧಿಸುವುದನ್ನು ಕೇಳಿ ಅವಳು ತುಂಬ ಪ್ರಭಾವಿತಳಾದಳು. ಅವನ ಸಂದೇಶ ಅವಳ ಹೃದಯವನ್ನು ತಟ್ಟಿತು. ಅವಳಲ್ಲಿ ಭಗವಂತನ ಬಗೆಗಿನ ವ್ಯಾಕುಲತೆ ತೀವ್ರವಾಯಿತು. ಅವಳ ಸೋದರಳಿಯನಾದ ರುಫಿನೊ ಎನ್ನುವವನೂ ಫ್ರಾನ್ಸಿಸ್‌ನ ಸಂದೇಶದತ್ತ ಆಕರ್ಷಿತನಾದನು. ಅಂದು ೧೨೧೨ರ ಮಾರ್ಚ್ ೨೮ರಂದು ಪುಣ್ಯ



ಕ್ಲೇರ್‌ಗೆ ತ್ಯಾಗಜೀವನದ ದೀಕ್ಷೆ

ಪರ್ವ ಪಾಮ್ ಸಂಡೆಯ ದಿವಸ. ಕ್ಲೇರ್ ತನ್ನ ಕುಟುಂಬಕ್ಕೆ ಸೇರಿದ ಭವ್ಯ ಮಹಲನ್ನು ತ್ಯಜಿಸಿದಳು. ಫ್ರಾನ್ಸಿಸ್ ಮಹಾತ್ಮನಲ್ಲಿ ಶರಣಾದಳು. ಕರುಣಾಳುವಾದ ಅವನು ಅವಳ ವಸತಿಗೆ ವ್ಯವಸ್ಥೆ ಮಾಡಿದನು. ಹೀಗೆ ಮಹಿಳೆಯರಿಗಾಗಿ ಸಂನ್ಯಾಸಿನಿಯರ ಸಂಪ್ರದಾಯವನ್ನು ಆರಂಭಿಸಿದನು. ಅವಳು ನಂತರದಲ್ಲಿ 'ಬಡವಳಾದ ಕ್ಲೇರ್' (Poor Clare) ಎಂದು ಕರೆಯಲ್ಪಟ್ಟಳು. ಕ್ಲೇರ್‌ಗೆ ಫ್ರಾನ್ಸಿಸ್ ಧಾರ್ಮಿಕ ಉಡುಪನ್ನು ಪ್ರದಾನ ಮಾಡಿದನು. ಅದು ಅವನ ಉಡುಪಿನಂತೆಯೇ ಇತ್ತು. ಕ್ರಮೇಣ ಇನ್ನೂ ಕೆಲವು ಮಹಿಳೆಯರು ತ್ಯಾಗಜೀವನವನ್ನು ಸ್ವೀಕರಿಸಿದರು. ಅವರೆಲ್ಲರನ್ನೂ ಬೆನೆಡಿಕ್ಟನ್ ಎಂಬ ಇನ್ನೊಂದು ಹಳೆಯ ಪಂಥದ ಸಂನ್ಯಾಸಿನಿಯರ ಜೊತೆಗೆ ವಾಸ ಮಾಡಲು ಏರ್ಪಾಡು ಮಾಡಿದನು. ತದನಂತರ, ಅವರನ್ನು ಅಸಿಸ್ಸಿಗೆ ಹತ್ತಿರದ ಸ್ಯಾನ್ ಡ್ಯಾಮಿನೊ ಚರ್ಚ್‌ಗೆ ಸ್ಥಳಾಂತರಗೊಳಿಸಿದನು. ಅಲ್ಲಿ ಇನ್ನೂ ಹೆಚ್ಚು ಸಾಧಕಿಯರು ಅವರ ಜೊತೆಗೆ ಸೇರಿಕೊಂಡರು.

ಇಷ್ಟು ಮಾತ್ರವಲ್ಲ , ಸಾಧಾರಣ ಜನರಿಗಾಗಿಯೂ ಫ್ರಾನ್ಸಿಸ್ ಒಂದು ಪಂಗಡವನ್ನು ಆರಂಭಿಸಿದನು. ಅದನ್ನು 'ವ್ರತಧಾರಿಗಳಾದ ಸಹೋದರ ಸಹೋದರಿಯರಿಂದ ಕೂಡಿದ ಮೂರನೆಯ ಪಂಗಡ' (Third Order of Brothers and Sisters of Penance) ಎಂದು ಕರೆಯಲಾಯಿತು. ಇದರ ಸದಸ್ಯರಿಗೆ ಮನೆ ಬಿಟ್ಟು ಬರ

ಬೇಕೆಂಬ ನಿರ್ಬಂಧವೇನೂ ಇರಲಿಲ್ಲ. ಅವರು ಯಾವುದೇ ರೀತಿಯ ತ್ಯಾಗದೀಕ್ಷೆಯನ್ನು ಸ್ವೀಕರಿಸುವ ಆವಶ್ಯಕತೆಯೂ ಇರಲಿಲ್ಲ. ಅದಕ್ಕೆ ಬದಲಾಗಿ, ತಮ್ಮ ದಿನನಿತ್ಯದ ಜೀವನದಲ್ಲಿಯೇ ಫ್ರಾನ್ಸಿಸ್ ಹೇಳಿ ಕೊಟ್ಟ ಬೋಧನೆಗಳನ್ನು ಅವರು ಅನುಸರಿಸುತ್ತಿದ್ದರು. ಈ ಮೂರ ನೆಯ ಪಂಥವು ಕಾಲಕ್ರಮೇಣ ಇಟೆಲಿ ದೇಶದ ಗಡಿಯನ್ನೂ ದಾಟಿ ವಿಸ್ತರಿಸಿತು.

## ಆಧ್ಯಾತ್ಮಿಕ ಪ್ರಚಾರ

೧೨೧೦ರಲ್ಲಿಯೇ, ಅಂದರೆ ಫ್ರಾನ್ಸಿಸ್ ತನ್ನ ಸಂನ್ಯಾಸಿಗಳ ಪಂಗಡವನ್ನು ಶುಭಾರಂಭ ಮಾಡಿದ ಕೆಲವೇ ದಿನಗಳಲ್ಲಿ, ಮೂರು ಜನ ಸಂಗಡಿಗರೊಂದಿಗೆ ಪ್ರಪ್ರಥಮ ಆಧ್ಯಾತ್ಮಿಕ ಪ್ರಚಾರ ಯಾತ್ರೆಗೆ ಹೊರಟನು. ಮೊಟ್ಟಮೊದಲು ಅವನ ಪಂಗಡವನ್ನು ಸೇರಿದ ಆ ಮೂವರು ಯುವಕರ ಹೆಸರುಗಳು ಹೀಗಿವೆ: ಬರ್ನಾರ್ಡ್, ಪೀಟರ್ ಕಟಾನಿ ಮತ್ತು ಗೈಲ್ಸ್ ಇವರುಗಳೇ ಅವರು. ಫ್ರಾನ್ಸಿಸ್ ಮತ್ತು ಗೈಲ್ಸ್ ಒಂದು ದಿಕ್ಕಿಗೆ ಹೊರಟರು. ಉಳಿದವರು ಇನ್ನೊಂದು ದಿಕ್ಕಿಗೆ ಹೋದರು. ಅನಂತರ, ಇನ್ನೂ ಎಂಟು ಜನ ಸಂನ್ಯಾಸಿಗಳಾ ದರು. ಹೀಗೆ ಅವನ ಪಂಗಡ ಬೆಳೆಯುತ್ತ ಹೋಯಿತು.

ಜಗತ್ತಿನ ಜನರೆಲ್ಲರಲ್ಲಿ ಭಗವಂತನ ಸಂದೇಶವನ್ನು ಬಿತ್ತುವ ಮಹತ್ ಸಂಕಲ್ಪವನ್ನು ಫ್ರಾನ್ಸಿಸ್ ಕೈಗೊಂಡನು. ಇಟೆಲಿ ದೇಶದ ಹೊರಗಡೆಯೂ ಕ್ರಿಸ್ತನ ಸಂದೇಶವನ್ನು ಪ್ರಸಾರಮಾಡಬೇಕೆಂಬ ಮಹದಾಸೆ ಅವನಿಗಿತ್ತು. ಅದಕ್ಕಾಗಿ ಅವನು ಹಲವು ಪ್ರಯತ್ನಗಳನ್ನು ಕೂಡ ಮಾಡಿದ್ದನು. ಕಡೆಗೆ ೧೨೧೨ ಇಸವಿಯ ಬೇಸಿಗೆ ಕಾಲದ ಕೊನೆಯಲ್ಲಿ 'ಪುಣ್ಯಭೂಮಿ' ಎಂದು ಕರೆಯಲ್ಪಡುವ ಜೆರುಸಲೆಮ್ ಪ್ರದೇಶಕ್ಕೆ ಯಾತ್ರೆ ಹೊರಟನು. ಅಲ್ಲಿನ ಮುಸ್ಲಿಮರಿಗೆ ಕ್ರಿಸ್ತಬೋಧನೆ ಯನ್ನು ಮಾಡುವ ಉದ್ದೇಶ ಅವನಿಗಿತ್ತು. ಆದರೆ ಮಾರ್ಗಮಧ್ಯದಲ್ಲಿ ಹಡಗು ಬಿರುಗಾಳಿಗೆ ಸಿಕ್ಕಿ ಅವನಿಗೆ ಹೋಗಲಾಗಲಿಲ್ಲ. ಅನಂತರ ಎರಡು ವರ್ಷಗಳ ನಂತರ, ಅವನು ಸ್ಪೈನ್ ದೇಶಕ್ಕೆ ಹೋಗಿ, ಅಲ್ಲಿನ ಮುಸ್ಲಿಮರಿಗೆ ಬೋಧನೆ ಮಾಡಲು ಇಚ್ಛಿಸಿದ್ದನು. ಆದರೆ ಅನಾ ರೋಗ್ಯದ ಕಾರಣ ಅವನಿಗೆ ಅಲ್ಲಿಗೆ ಹೋಗಲಾಗಲಿಲ್ಲ. ಹಾಗೆಯೇ ೧೨೧೭ರಲ್ಲಿ ಫ್ರಾನ್ಸಿಸ್ ಫ್ರಾನ್ಸ್ ದೇಶಕ್ಕೆ ಹೋಗಿ, ಅಲ್ಲಿನ ಜನರಿಗೆ ಧರ್ಮಪ್ರಚಾರವನ್ನು ಮಾಡಲು ಬಯಸಿದ್ದನು. ಆದರೆ, ಆತನ ಮಿತ್ರನಾಗಿದ್ದ ಕಾರ್ಡಿನಲ್ ಉಗೊಲಿನೊ ಎನ್ನುವವನು ಇಟಲಿ ದೇಶದಲ್ಲಿ ಅವನ ಆವಶ್ಯಕತೆ ಇದೆ ಎಂದು ಹೇಳಿ, ಅವನನ್ನು ಪಯ ಣಿಸಬಾರದೆಂದು ಒತ್ತಾಯಿಸಿದನು. ಕಡೆಗೆ ೧೨೧೯ರಲ್ಲಿ ಫ್ರಾನ್ಸಿಸ್ ಈಜಿಪ್ಟಿಗೆ ಹೋದನು. ಅಲ್ಲಿ ಕ್ರೈಸ್ತ ಹೋರಾಟಗಾರರು (crusa ders) ಡಮಿಯೆಟ್ಟ ಎಂಬ ಊರಿಗೆ ಮುತ್ತಿಗೆ ಹಾಕಿದ್ದರು. ಫ್ರಾನ್ಸಿಸ್ ಅಲ್ಲಿಗೆ ಹೋದನು. ಶತ್ರುಪಕ್ಷದ ಪಾಳಯಕ್ಕೆ ತಾನೊಬ್ಬನೇ ಹೋದನು. ಅಲ್ಲಿನ ಸುಲ್ತಾನನಾದ ಅಲ್ ಕಾಮಿಲ್ ಎನ್ನುವವನನ್ನು ಭೇಟಿ ಮಾಡಿದನು. ಅವನಿಗೆ ದಿವ್ಯೋಪದೇಶವನ್ನು ಮಾಡಿದನು. ಇದರಿಂದ ಸುಲ್ತಾನನು ತುಂಬ ಪ್ರಭಾವಿತನಾದನು. ಪುಣ್ಯಕ್ಷೇತ್ರ ವಾದ ಜೆರುಸಲೆಮ್ ಪ್ರದೇಶದ ಆಸುಪಾಸಿನಲ್ಲಿರುವ ತೀರ್ಥಕ್ಷೇತ್ರ ಗಳನ್ನು ಸಂದರ್ಶಿಸಲು ಅನುಮತಿ ನೀಡಿದನು.

ಆದರೆ ಕೆಲಕಾಲದಲ್ಲಿಯೇ ತನ್ನ ಮಠದಲ್ಲಿ ಕೆಲವು ತೊಂದರೆಗಳು ಉದ್ಭವವಾಗಿರುವುದರ ಬಗ್ಗೆ ವರ್ತಮಾನ ಅವನಿಗೆ ಬಂದಿತು. ಇದ ರಿಂದ ಇಟೆಲಿಗೆ ಕೂಡಲೇ ಅವನು ಹಿಂತಿರುಗಬೇಕಾಯಿತು. ಫ್ರಾನ್ಸಿಸ್‌ನ ಸಂನ್ಯಾಸಿ ಸಂಪ್ರದಾಯವು ದಿನದಿನಕ್ಕೂ ಬೆಳೆಯುತ್ತ ಲಿತ್ತು. ಹೆಚ್ಚು ಹೆಚ್ಚು ಜನರು ಇದಕ್ಕೆ ಸೇರುತ್ತಿದ್ದರು. ಫ್ರಾನ್ಸಿಸ್ ಈ ಪರಿಸ್ಥಿತಿಯನ್ನು ಪರಿಗಣಿಸಿ, ಹೊಸದೊಂದು ನಿಯಮಾವಳಿಯನ್ನು ರಚಿಸಿದನು. ಅದು ಮೊದಲು ಅವನು ರಚಿಸಿದ ನಿಯಮಾವಳಿಗಿಂತ ಹೆಚ್ಚು ವಿವರಗಳಿಂದ ಕೂಡಿತ್ತು. ಈ ನಿಯಮಾವಳಿಯಲ್ಲಿ ಕೂಡ ಫ್ರಾನ್ಸಿಸ್, ಸಂನ್ಯಾಸ ಜೀವನದಲ್ಲಿ 'ಬಡತನ'ಕ್ಕೆ ಬಹಳ ಮಹತ್ವ ವಿರುವುದನ್ನು ಒತ್ತಿಹೇಳಿದನು. ಇದಲ್ಲದೆ ತನ್ನ ಸಂನ್ಯಾಸ ಪಂಥದ ದಿನನಿತ್ಯದ ವ್ಯವಹಾರವನ್ನು ನೋಡಿಕೊಳ್ಳುವುದಕ್ಕಾಗಿ 'ವಿಕಾರ್' ಅಥವಾ ಚರ್ಚ್‌ನ ಪಾದ್ರಿಯಾಗಿ ಪೀಟರ್ ಕಟಾನಿಯನ್ನು ನೇಮಕ ಮಾಡಿದನು. ಎರಡು ವರ್ಷಗಳ ನಂತರ ತನ್ನ ನಿಯಮಾವಳಿಯನ್ನು ತಾನೇ ಪರಿಷ್ಕರಿಸಿದನು. ಅದನ್ನು ಪೋಪ್ ಧರ್ಮಗುರುವಿಗೆ ನಿವೇ ದಿಸಿದನು. ಇದಕ್ಕೆ ಪೋಪ್ ಧರ್ಮಗುರುವು ೧೨೨೩ರ ನವೆಂಬರ್ ೨೯ರಂದು ಮಾನ್ಯತೆಯನ್ನು ನೀಡಿದನು. ಇದು ಸಂನ್ಯಾಸೀ ಪಂಥದ ಅಧಿಕೃತ ನಿಯಮಾವಳಿ ಎಂದು ಪರಿಗಣಿಸಲ್ಪಟ್ಟಿತು. ಇದು ಸಂನ್ಯಾಸೀ ಪಂಥದ ಅನುಯಾಯಿಗಳಿಗೆ ಪ್ರಭುವಾದ ಏಸುಕ್ರಿಸ್ತನ ದಿವ್ಯ ಸಂದೇಶದ ಅನುಸಾರವಾಗಿ ಜೀವನವನ್ನು ನಡೆಸುವಂತೆಯೂ, ತನ್ನದು ಎನ್ನುವ ಯಾವುದನ್ನೂ ಇಟ್ಟುಕೊಳ್ಳದೆ, ಪರಿಶುದ್ಧ ಬ್ರಹ್ಮ ಚರ್ಯವನ್ನು ಆಚರಿಸುತ್ತ ವಿಧೇಯತೆಯಿಂದ ಸಂನ್ಯಾಸಿ ಜೀವನ ವನ್ನು ನಡೆಸುವಂತೆಯೂ ಕರೆಕೊಟ್ಟಿತು. ಇದಲ್ಲದೆ, ಈ ನಿಯಮಾ ವಳಿಯು ಹಲವಾರು ರೀತಿಯ ಶಿಸ್ತಿನ ನಿಯಮಗಳನ್ನು, ಧರ್ಮ ಪ್ರಚಾರದ ವಿಧಾನಗಳನ್ನು ಮತ್ತು ಸಂನ್ಯಾಸಿ ಸಂಘಕ್ಕೆ ಪ್ರವೇಶಿಸುವು ದಕ್ಕೆ ಬೇಕಾದ ಅರ್ಹತೆಗಳ ವಿವರಗಳನ್ನು ಒಳಗೊಂಡಿತ್ತು. ಈ ನಿಯ ಮಾವಳಿಯನ್ನು ರಚಿಸಿದ ನಂತರ, ಫ್ರಾನ್ಸಿಸ್ ನಿಧಾನವಾಗಿ ದಿನ ನಿತ್ಯದ ಆಡಳಿತದಿಂದ ನಿವೃತ್ತನಾಗತೊಡಗಿದನು; ಹೆಚ್ಚು ಹೆಚ್ಚು ಏಕಾಂತ ಜೀವನವನ್ನು ನಡೆಸಲಾರಂಭಿಸಿದನು.

## 'ಫ್ರಾನ್ಸಿಸ್‌ನ ಪುಟ್ಟ ಪುಟ್ಟ ಪುಷ್ಪಗಳು'

'ಫ್ರಾನ್ಸಿಸ್‌ನ ಪುಟ್ಟ ಪುಟ್ಟ ಪುಷ್ಪಗಳು'(Little Flowers of Francis) ಒಂದು ಅಪೂರ್ವ ಪುಸ್ತಕ. ಇದರಲ್ಲಿ ಅಸಿಸ್ಸಿಯ ಫ್ರಾನ್ಸಿಸ್ ಜೀವನದಲ್ಲಿ ಬರುವ ಸುಂದರವಾದ ಹಲವಾರು ಘಟನೆಗಳನ್ನು ಹೆಣೆಯಲಾಗಿದೆ. ಇದನ್ನು ಒಬ್ಬ ಅಜ್ಞಾತ ಇಟಾಲಿಯನ್ ಫ್ರಾನ್ ಸಿಸಿಯನ್ ಸಂನ್ಯಾಸಿ ನೂರು ವರ್ಷಗಳ ನಂತರ ರಚಿಸಿದನು. ಇದರಲ್ಲಿನ ಒಂದು ಪ್ರಸಂಗವನ್ನು ಈಗ ನೋಡೋಣ:

ಒಮ್ಮೆ ಫ್ರಾನ್ಸಿಸ್ ಪೋರ್ಟಿಯುನ್‌ಕುಲ ಚರ್ಚ್‌ನಲ್ಲಿ ವಾಸ ಮಾಡುತ್ತಿದ್ದನು. ಅವನ ಜೊತೆಗೆ ಸಹೋದರ ಮಸೆವೊ ಎನ್ನುವವನು ಕೂಡ ಇದ್ದನು. ಅವನು ತನ್ನ ಪವಿತ್ರತೆ ಮತ್ತು ವಿವೇಚನಾಶಕ್ತಿಗಳಿಗೆ ಹೆಸರಾಗಿದ್ದನು. ಭಗವಂತನ ಬಗ್ಗೆ ಬಹಳ ಗಾಂಭೀರ್ಯದಿಂದ ಮಾತನಾಡುತ್ತಿದ್ದನು. ಈ ಎಲ್ಲ ಉದಾತ್ತ ಗುಣಗಳಿಗಾಗಿ ಫ್ರಾನ್ಸಿಸ್ ಅವನನ್ನು ಬಹಳಷ್ಟು ಮೆಚ್ಚಿಕೊಂಡಿದ್ದನು. ಒಂದು ದಿನ ಫ್ರಾನ್ಸಿಸ್

ಕಾಡಿನಲ್ಲಿ ವಿಹಾರ ಮಾಡಿ, ವಾಪಸ್ಸು ಬರುತ್ತಿದ್ದನು. ಅಲ್ಲಿ ಅವನು ಏಕಾಂತವಾಗಿ ಪ್ರಾರ್ಥನೆಯಲ್ಲಿ ಮಗ್ನನಾಗಿದ್ದನು. ಮಸೆವೊ ಫ್ರಾನ್ಸಿಸ್‌ನ ವಿನೀತಭಾವವನ್ನು ಪರೀಕ್ಷಿಸಲು ನಿರ್ಧರಿಸಿದನು. ಅಣಕ ವಾಡುತ್ತ ಅವನು ಫ್ರಾನ್ಸಿಸ್‌ಗೆ ಹೀಗೆ ಹೇಳಿದನು: ''ಎಲ್ಲರೂ ನಿನ್ನನ್ನೇ ಏಕೆ ಅನುಸರಿಸುತ್ತಾರೆ?'' ಫ್ರಾನ್ಸಿಸ್‌ಗೆ ಈ ಪ್ರಶ್ನೆಯ ಮರ್ಮ ತಿಳಿಯಲಿಲ್ಲ. ಅವನು, ''ಸಹೋದರ, ಹಾಗೆಂದರೇನು?'' ಎಂದು ಕೇಳಿದನು. ಮಸೆವೊ ವಿವರಿಸಿ ಹೇಳಿದನು: ''ಇಡೀ ಜಗತ್ತೇ ನಿನ್ನನ್ನು ಹಿಂಬಾಲಿಸುತ್ತಿದೆ. ಎಲ್ಲರೂ ನಿನ್ನ ದರ್ಶನ ಮಾಡಲು ಹಾತೊರೆಯು ತ್ತಿದ್ದಾರೆ. ನಿನ್ನ ಉಪದೇಶವನ್ನು ಕೇಳಲು ಉತ್ಸುಕರಾಗಿದ್ದಾರೆ. ನೀನೇನೂ ನೋಡಲು ಸುಂದರವಾಗಿಲ್ಲ, ನಿನಗೆ ಹೆಚ್ಚೇನೂ ಪಾಂಡಿತ್ಯ ವಾಗಲಿ, ಜ್ಞಾನವಾಗಲಿ ಇಲ್ಲವೇ ಇಲ್ಲ. ಆದರೂ ಇಡೀ ಜಗತ್ತೇ ನಿನ್ನನ್ನು ಹಿಂಬಾಲಿಸುತ್ತಿದೆ. ಇದರ ರಹಸ್ಯವೇನು?''

ಇದನ್ನು ಕೇಳಿದ ಫ್ರಾನ್ಸಿಸ್ ಏನೂ ಮಾತನಾಡಲಿಲ್ಲ. ಆತ್ಮ ಸಂತೋಷದಿಂದ ಗಗನದತ್ತ ಮುಖಮಾಡಿಕೊಂಡು, ಬಹಳ ಕಾಲದ ವರೆಗೂ ಭಗವಂತನ ಚಿಂತನೆಯಲ್ಲಿ ಮುಳುಗಿಹೋದನು. ತುಂಬ ಸಮಯದ ನಂತರ, ತನ್ನ ಈ ತನ್ಮಯತೆಯಿಂದ ಹೊರಬಂದು ಮಸೆವೊ ಸಹೋದರನಿಗೆ ಭಾವಪೂರ್ಣವಾಗಿ ಹೀಗೆ ಹೇಳಿದನು:

''ಸಹೋದರ, ಜನರೆಲ್ಲ ನನ್ನ ಹಿಂದೆ ಏಕೆ ಬರುತ್ತಿದ್ದಾರೆ, ಗೊತ್ತೇನು? ಭಗವಂತನೇ ನನಗೆ ಈ ಶಕ್ತಿಯನ್ನು ಪ್ರದಾನ ಮಾಡಿ ದ್ದಾನೆ. ಅವನ ದಿವ್ಯಚಕ್ಷುಗಳು ಈ ಜಗತ್ತಿನ ಎಲ್ಲ ಒಳಿತನ್ನೂ, ಎಲ್ಲ ಕೆಡುಕನ್ನೂ ನೋಡುತ್ತಿವೆ, ಅಲ್ಲವೆ? ಆ ದಿವ್ಯ ಮತ್ತು ಪವಿತ್ರ ಕಣ್ಣುಗಳಿಗೆ ನನಗಿಂತ ಅತ್ಯಂತ ಕೆಟ್ಟ, ದುಷ್ಟ, ನಿರುಪಯೋಗಿ ವ್ಯಕ್ತಿ ಕಂಡುಬರಲೇ ಇಲ್ಲ ಎಂದು ಕಾಣುತ್ತದೆ. ಭಗವಂತನಿಗೆ ಒಂದು ಅದ್ಭುತವನ್ನು ತೋರಬೇಕಾಗಿತ್ತು. ಅದಕ್ಕೆಂದೇ ನನ್ನಂಥ ಅತಿ ಮೂರ್ಖ ವ್ಯಕ್ತಿಯನ್ನು ಆತನ ಉಪಕರಣವಾಗಿ ಮಾಡಿಕೊಂಡಿದ್ದಾನೆ. ಏಕೆಂದರೆ, ನನಗಿಂತ ಕೆಳಮಟ್ಟದ ಮನುಷ್ಯ ಭಗವಂತನಿಗೆ ಸಿಕ್ಕಲೇ ಇಲ್ಲ. ಹಾಗೆಂದೇ ಅವನು ನನ್ನನ್ನು ಆರಿಸಿಕೊಂಡಿದ್ದಾನೆ. ನನ್ನಂಥ ಮೂರ್ಖ ವ್ಯಕ್ತಿಯ ಆಯ್ಕೆ ಯಿಂದ ಜ್ಞಾನಿಗಳಿಗೆ ಲಜ್ಜೆಯನ್ನು ಉಂಟುಮಾಡುವುದೇ ಭಗವಂತನ ಉದ್ದೇಶವಾಗಿದೆ. ಭಗವಂತನು ಕೆಲವೊಮ್ಮೆ ನೀಚವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ, ಗೊತ್ತೆ? ಎಲ್ಲ ಮಹಾನ್ ಗುಣಗಳು, ಉದಾತ್ತ ಚಾರಿತ್ರ್ಯ, ಶಕ್ತಿಯುತ ಸಾಮರ್ಥ್ಯ – ಇವುಗಳೆಲ್ಲವೂ ಭಗವಂತನು ಅನುಗ್ರಹಿಸುವುದೇ ಹೊರತು, ಒಬ್ಬ ಮನುಷ್ಯ ತನಗೆ ತಾನೇ ಗಳಿಸಿ ಕೊಳ್ಳುವುದಲ್ಲ. ಭಗವಂತನ ಮುಂದೆ ಮನುಷ್ಯ ತನ್ನ ವೈಭವವನ್ನು ಮೆರೆಯಬಾರದು. ತನ್ನದೆಲ್ಲವೂ ಭಗವಂತನಿಂದಲೇ ಬಂದದ್ದು ಎಂದು ಅವನು ಸದಾ ನೆನಪಿಡಬೇಕು. 'ಗರ್ವಪಡುವುದಿದ್ದರೆ, ತಾನು ಭಗವಂತನಿಗೆ ಸೇರಿದವನು ಎಂಬ ಗರ್ವವಿರಲಿ' ಎಂಬ ಮಾತನ್ನು ಸ್ಮರಿಸಿಕೊಳ್ಳಬೇಕು. ಮಾನವನು ತನ್ನ ಮಾನ ಮತ್ತು ಪ್ರತಿಷ್ಠೆಗಳನ್ನು ಭಗವಂತನದೇ ಎಂದು ಅವನಿಗೆ ಸಮರ್ಪಿಸಬೇಕು. ಇದನ್ನು ಜನರಿಗೆ ನೆನಪಿಸಲೆಂದೇ ಭಗವಂತನು ನನ್ನನ್ನು ಆರಿಸಿಕೊಂಡಿದ್ದಾನೆ.''

ಫ್ರಾನ್ಸಿಸ್‌ನ ಅತಿ ಉದಾತ್ತ ವಿನೀತಭಾವವನ್ನು ಕಂಡು ಸಹೋ ದರ ಮಸೆವೊನ ಹೃದಯ ತುಂಬಿಬಂತು. ಫ್ರಾನ್ಸಿಸ್ ಏಸುಕ್ರಿಸ್ತನ ನೈಜ ಮತ್ತು ವಿನೀತ ಅನುಯಾಯಿಯೆಂದು ಅವನಿಗೆ ಮನವರಿಕೆ ಯಾಯಿತು.

ಸ್ವಾಮಿ ಯತೀಶ್ವರಾನಂದಜಿ ಅವರ 'ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ' ಒಂದು ಶ್ರೇಷ್ಠ ಗ್ರಂಥ. ಇದರಲ್ಲಿ *(ಪುಟ ೪೦೨ ಮತ್ತು ೪೮೮)* ಸ್ವಾಮೀಜಿಯವರು ಸಂತ ಫ್ರಾನ್ಸಿಸ್‌ನ ಆಧ್ಯಾತ್ಮಿಕ ಔನ್ನತ್ಯ ವನ್ನು ವಿಶೇಷವಾಗಿ ಉಲ್ಲೇಖಿಸುತ್ತಾರೆ:

ನೂರಾರು ವರ್ಷಗಳ ನಂತರ ಅಸ್ಸಿಸಿಯಲ್ಲಿ ಸಂತ ಫ್ರಾನ್ಸಿಸ್ ಹುಟ್ಟಿದನು. ಅವನು ವಿಲಾಸೀ ಯುವಕ ತಂಡದ ಮುಂದಾಳಾಗಿದ್ದ. ಅವನನ್ನು ಎಲ್ಲರೂ 'ಭೋಗರಾಜ' ಎಂದು ಕರೆಯುತ್ತಿದ್ದರು. ಒಂದು ದಿನ ಅವನು ಸಣ್ಣ ಚರ್ಚೊಂದರಲ್ಲಿ ಪ್ರಾರ್ಥಿಸುತ್ತಿದ್ದಾಗ ಚರ್ಚನ್ನು ದುರಸ್ತಿ ಮಾಡೆಂದು ಒಂದು ದಿವ್ಯವಾಣಿ ಕೇಳಿಬಂತು. ಕೂಡಲೆ ಅವ ನಲ್ಲಿ ಪರಿವರ್ತನೆಯುಂಟಾಗಿ ಆಧ್ಯಾತ್ಮಿಕ ಜೀವನವನ್ನು ಹಿಡಿದ. ಪರಿ ವರ್ತನೆಯ ನಂತರ ಅವನು ಭಗವಂತನನ್ನು ಸ್ತುತಿಸುತ್ತ ಪರ್ವತ ಪ್ರದೇಶದಲ್ಲಿ ಹೋಗುತ್ತಿದ್ದಾಗ ಒಂದು ದರೋಡೆಕೋರರ ಗುಂಪು ಅವನನ್ನು ಸಂಧಿಸಿತು. ''ಯಾರು ನೀನು?'' – ಗುಡುಗಿದರು ಅವರು. ''ನಾನು ಮಹಾರಾಜನ (ಭಗವಂತನ) ದೂತ'' ಎಂದ ಫ್ರಾನ್ಸಿಸ್. ಕುಪಿತರಾದ ಅವರು ಹಿಮ ತುಂಬಿದ ಹೊಂಡದಲ್ಲಿ ಅವ ನನ್ನು ತಳ್ಳಿ ಹೊರಟುಹೋದರು. ಆದರೆ ಫ್ರಾನ್ಸಿಸ್ ಸ್ವಲ್ಪವೂ ವಿಚಲಿತ ನಾಗದೆ ಮೇಲೆದ್ದು ಮೊದಲಿನಂತೆಯೇ ಭಗವಂತನನ್ನು ಸ್ತುತಿಸುತ್ತ ಮುಂದೆ ಹೊರಟ. ಅವನಲ್ಲುಂಟಾಗಿದ್ದ ಆಧ್ಯಾತ್ಮಿಕ ಪರಿವರ್ತನೆ ಎಂಥ ಕಷ್ಟವನ್ನೂ ಎದುರಿಸುವ ಶಕ್ತಿಯನ್ನು ನೀಡಿತ್ತು.

ಜೀವನದ ಕೊನೆಗಾಲದಲ್ಲಿ ಅವನಿಗೆ ಅಂಧತ್ವ ಬಂದು ಕಾಯಿಲೆ ಯಿಂದ ಹಾಸಿಗೆ ಹಿಡಿದ. ಆದರೆ ತನ್ನ ಸಂಕಟವನ್ನು ಸಂತೋಷದಿಂದ ಸಹಿಸಿದ. ಅವನಿಗೆ ಸಾವಿನ ಭಯವೇ ಇರಲಿಲ್ಲ. 'ಸಹೋದರ ಮೃತ್ಯು' ಎಂದು ಅದನ್ನು ಸ್ವಾಗತಿಸಿದ. ಅವನು ತನ್ನನ್ನು ಸಂಪೂರ್ಣ ವಾಗಿ ಭಗವಂತನಿಗೆ ಅರ್ಪಿಸಿ ತನ್ನನ್ನು ಅವನ ಉಪಕರಣವೆಂದು ಭಾವಿಸಿದ. ಈ ಕೆಳಗಿನ ಅವನ ಪ್ರಾರ್ಥನೆಗಳು ಪೂರ್ಣ ಪ್ರಪತ್ತಿಯನ್ನು ಪ್ರತಿಬಿಂಬಿಸುತ್ತವೆ:

*ದ್ವೇಷವಿರುವೆಡೆಯಲ್ಲಿ ಪ್ರೀತಿಯನು ಬಿತ್ತುತ್ತ,*
*ನೋವು ಸಂಕಟದಲ್ಲಿ ಸಾಂತ್ವನವನೀಯುತ್ತ,*
*ಸಂಶಯವು ಇರುವಲ್ಲಿ ಶ್ರದ್ಧೆಯನು ಬಿತ್ತುತ್ತ*
*ದುಃಖಿತಪ್ಪರಿಗಾನಂದವನು ನೀಡುತ್ತ ಇರುವಂಥ*
*ನಿನ್ನ ಶಾಂತಿಯ ಕೈಗೊಂಬೆ ಮಾಡೆನ್ನ ದೇವ.*

*ಸಾಂತ್ವನ ಬಯಸುವ ಬದಲು ಸಾಂತ್ವನ ನೀಡುವ ಬಯಕೆ*
*ಗೌರವ ಬಯಸುವ ಬದಲು ಗೌರವವನೀಯುವ ಬಯಕೆ*
*ಪ್ರೀತಿಯಾಶೆಯ ಬದಲು ಪ್ರೀತಿಸುವ ಬಯಕೆ*
*ಇವುಗಳನಿತ್ತು ರಕ್ಷಿಸು ನಮ್ಮ ದೇವದೇವ.*
*ನೀಡುವುದರಿಂದ ಪಡೆದಂತಾಗುವುದು,*
*ಕ್ಷಮಿಸುವುದರಿಂದ ಕ್ಷಮಿಸಲ್ಪಡುವೆವು,*
*ಮೃತ್ಯುವಿನಿಂದ ಅಮೃತತ್ತ್ವ ದೊರೆಯುವುದು.*